# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಶೆಟ್ಟಿಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ

ಸಂಖ್ಯೆ:ಸ.ಕಾ.ಅ/ಶೆ.ಉ.ವಿ/ವಾ.ಸ/ವಾ.13/ಡೀಟರ್/ /2022-23 ದಿನಾಂಕ: 23.05.2022

## ಮಲ್ಲಸಂದ್ರ ವಾರ್ಡ್-13 ರ ವಾರ್ಡ್ ಸಭೆಯ (Ward Decentralized Traige and Emergency Response (DETER) Committee for COVID-19) ನಡವಳಿ

ದಿನಾಂಕ: 23.05.2022 ರಂದು ಬೆಳಗ್ಗೆ 11.00 ಗಂಟೆಗೆ ಶ್ರೀ.ಎಸ್.ಎಲ್. ವಿಶ್ವನಾಥ್, ವಾರ್ಡ್ ಕಮಿಟಿ ನೋಡಲ್ ಆಫೀಸರ್ ರವರ ಅಧ್ಯಕ್ಷತೆಯಲ್ಲಿ ಮಲ್ಲಸಂದ್ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಹಾಜರಿದ್ದವರು:

1. ಶ್ರೀ. ಎಸ್.ಎಲ್. ವಿಶ್ವನಾಥ್, ವಾರ್ಡ್ ಕಮಿಟಿ ನೋಡಲ್ ಆಫೀಸರ್, ವಾರ್ಡ್ ನಂ.13 ಮಲ್ಲಸಂದ್ರ
2. ಶ್ರೀ ಎಸ್.ಎಸ್. ಕೃಷ್ಣಮೂರ್ತಿ, ಸಹಾಯಕ ಅಭಿಯಂತರರು, ವಾರ್ಡ್ ನಂ.13 ಮಲ್ಲಸಂದ್ರ
3. ಶ್ರೀ ಡಾ|| ದಯಾನಂದ್ ಜಿ.ಆರ್, ಆರೋಗ್ಯ ವೈದ್ಯಾಧಿಕಾರಿಗಳು, ವಾರ್ಡ್ ನಂ.13 ಮಲ್ಲಸಂದ್ರ
4. ಶ್ರೀ ಪಾರ್ಥ, ಹಿರಿಯ ಆರೋಗ್ಯ ಪರಿವೀಕ್ಷಕರು, ಮಲ್ಲಸಂದ್ರ
5. ಶ್ರೀ ಆದರ್ಶ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
6. ಶ್ರೀ ತಿಮ್ಮಯ್ಯ, ಬೆಸ್ಕಾಂ.
7. ಶ್ರೀ ಕೆ.ಎನ್. ರಾಜಪ್ಪ, ರೇಂಜ್ ಫಾರೆಸ್ಟ್ ಆಫೀಸರ್
8. ಶ್ರೀ ಶಿವಲಿಂಗೇಗೌಡ, ತೋಟಗಾರಿಕಾ ಇಲಾಖೆ
9. ಶ್ರೀ ಸಂಜೀವಪ್ಪ, ಅರಣ್ಯ ಇಲಾಖೆ.
10. ಶ್ರೀ ರಾಜ್‌ಕುಮಾರ್, ಕಂದಾಯ ಪರಿವೀಕ್ಷಕರು
11. ಶ್ರೀ ಉಮೇಶ್, ಬೋರ್‌ವೆಲ್ ವಿಭಾಗ.
12. ಶ್ರೀ ಬೈಲಪ್ಪ ರವರು ವಾರ್ಡ್ ಸಮಿತಿ ಸದಸ್ಯರು.
13. ಶ್ರೀ ಲಕ್ಷ್ಮೀಪತಿ, ರವರು ವಾರ್ಡ್ ಸಮಿತಿ ಸದಸ್ಯರು.
14. ಶ್ರೀ ಮಹಾದೇವ್ ಎಂ. ಮಾರ್ಷಲ್, ಮಲ್ಲಸಂದ್ರ.
15. ಶ್ರೀ ಅಂಬರೀಶ್ ಬಿ.ಎಲ್. ವಾರ್ಡ್ ಸಮಿತಿ ಸದಸ್ಯರು.
16. ಶ್ರೀ ಗೋಪಾಲ್, ವಾರ್ಡ್ ಸಮಿತಿ ಸದಸ್ಯರು.

ಶ್ರೀ. ಎಸ್.ಎಸ್. ಕೃಷ್ಣಮೂರ್ತಿ, ವಾರ್ಡ್ ಕಾರ್ಯದರ್ಶಿರವರು ವಾರ್ಡ್ ಸಭೆಯಲ್ಲಿ ನೋಡಲ್ ಅಧಿಕಾರಿಯಾದ ವಿಶ್ವನಾಥ್ ರವರಿಗೆ ಹಾಗೂ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸದಸ್ಯರುಗಳಿಗೆ ಅಧಿಕಾರಿಗಳಿಗೆ ಮತ್ತು ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಕಾರ್ಯದರ್ಶಿಗಳು ಮಾತನಾಡಿ ಈ ಹಿಂದಿನ ಸಭೆಯಲ್ಲಿ ನಡೆದ ನಡುವಳಿಗಳ ಬಗ್ಗೆ ಮತ್ತು ನಡುವಳಿಗಳಿಗೆ ಪೂರಕವಾಗಿ ತೆಗೆದುಕೊಂಡ ಕ್ರಮದ ಬಗ್ಗೆ ವಿವರಿಸಿದರು.

## ದಿನಾಂಕ: 23.05.2022 ರಂದು ನಡೆದ ಸಭಾ ನಡವಳಿಗಳು

1. ಕೆಟ್ಟು ಹೋಗಿರುವ ಬೀದಿದೀಪಗಳನ್ನು ಸರಿಪಡಿಸಿಕೊಡಬೇಕೆಂದು ಸಭೆಗೆ ತಿಳಿಸಿದರು.

ಉತ್ತರ:- ಈ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿರವರಿಗೆ ತಿಳಿಸಲಾಯಿತು.

2. ಬೆಸ್ಕಾಂ ಅಧಿಕಾರಿಗಳು ಸಭೆಗೆ ಹಾಜರಾಗುತ್ತಿಲ್ಲವೆಂದು ಸನ್ಮಾನ್ಯ ಅಧ್ಯಕ್ಷರು ತಿಳಿಸಿದರು.

ಉತ್ತರ:– ಈ ವಿಷಯವಾಗಿ ಮುಂಬರುವ ಸಭೆಗೆ ಕರೆಯಿಸುವುದಾಗಿ ತಿಳಿಸಲಾಯಿತು.

3. ಸಿಲ್ಟ್ ಅಂಡ್ ಟ್ರಾಕ್ಟರ್ ಕಾಮಗಾರಿಯು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಶ್ರೀ ಗೋಪಾಲ್ ರವರು ದೂರಿದರು.

ಉತ್ತರ:– ಟೆಂಡರ್ ಪ್ರಕ್ರಿಯೆಯಲ್ಲಿ ಸ್ವಲ್ಪ ಅಡಚಣೆಗಳು ಉಂಟಾಗಿರುವುದರಿಂದ ಕಾಮಗಾರಿ ಕೈಗೊಳ್ಳಲು ವಿಳಂಬವಾಗುತ್ತಿರುವಾಗಿ ತಿಳಿಸಿ ಆದಷ್ಟು ಬೇಗ ಸರಿಪಡಿಸುವುದಾಗಿ ತಿಳಿಸಲಾಯಿತು.

4. ತೋಟಗಾರಿಕಾ ಇಲಾಖೆ ರವರು ಸುಮಾರು 2000 ಗಿಡಗಳಿಗೆ ಟೆಂಡರ್ ಆಗಿರುವುದರಿಂದ ಸರಿಯಾದ ಸ್ಥಳಗಳನ್ನು ತೋರಿಸಿದರೆ ಹಾಕಿಸಿಕೊಡುವುದಾಗಿ ತಿಳಿಸಿದರು.

ಉತ್ತರ:– ಈ ವಿಷಯವಾಗಿ ಸ್ಥಳದಲ್ಲಿ ಹಾಜರಿದ್ದ ವಾರ್ಡ್‌ನ ಸದಸ್ಯರಿಗೆ ತಿಳಿಸಿ ಜಾಗ ತೋರಿಸಿಕೊಡಬೇಕೆಂದು ಹೇಳಲಾಯಿತು.

5. ಮಲ್ಲಸಂದ್ರ ಮುಖ್ಯರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಗೆ ಸಂಬಂಧಪಟ್ಟಂತೆ ನೀರು ರಸ್ತೆಯಲ್ಲಿ ಹರಿಯುತ್ತಿರುವುದಾಗಿ ದೂರು ನೀಡಿದರು.

ಉತ್ತರ:– ಈ ವಿಷಯವಾಗಿ ಯೋಜನಾ ವಿಭಾಗಕ್ಕೆ ತಿಳಿಸಿ ಸರಿಪಡಿಸುವುದಾಗಿ ತಿಳಿಸಿದರು.

## ಈ ಹಿಂದೆ ನಡೆದ ಸಭಾ ನಡವಳಿಗಳು

6. ಶ್ರೀ ಸುರೇಶ್ ಕೆಂಪೇಗೌಡ ರವರು ಮಾತನಾಡಿ ಮುನೇಶ್ವರ ದೇವಸ್ಥಾನ ಸುತ್ತಮುತ್ತ ಸಮರ್ಪಕವಾಗಿ ಕಸ ವಿಲೇವಾರಿ ನಿರ್ವಹಿಸುವಂತೆ ಮತ್ತು ಖಾಲಿ ನಿವೇಶನದಲ್ಲಿ ಕಸವನ್ನು ಹಾಕುತ್ತಿರುವುದರ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ಕೋರಿದರು.

ಉತ್ತರ:– ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಎಸ್.ಡಬ್ಲ್ಯೂ.ಎಂ ಅಧಿಕಾರಿರವರು ಕಸವನ್ನು ವಿಲೇವಾರಿ ಮಾಡುತ್ತಿರುವುದಾಗಿ ತಿಳಿಸಿದರು.

7. ಶ್ರೀ ಭೈಲಪ್ಪ ರವರು ಮಾತನಾಡಿ ರವೀಂದ್ರ ನಗರದ 1ನೇ ಮುಖ್ಯರಸ್ತೆ 3ನೇ ಅಡ್ಡರಸ್ತೆ ಇಲ್ಲಿ ವಿದ್ಯುತ್ ಕಂಬ ಮುರಿದು ಬೀಳುವ ಸ್ಥಿತಿಯಲ್ಲಿ ಇದ್ದು ಕೂಡಲೇ ದುರಸ್ಥಿಪಡಿಸಲು ಕೋರಿದರು.

ಉತ್ತರ:– ಈ ವಿಷಯವಾಗಿ ಚರ್ಚಿಸಲು ಬೆಸ್ಕಾಂ ರವರು ಹಾಜರಿಲ್ಲದ ಕಾರಣ ಅವರಿಗೆ ತಿಳಿಸುವುದಾಗಿ ತಿಳಿಸಲಾಯಿತು.

8. ಶ್ರೀ ಗೋಪಾಲ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಬೀದಿದೀಪಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಮತ್ತು ಪೈಪ್‌ಲೈನ್ ಪಾರ್ಕ್‌ನಲ್ಲಿ ಮರದ ಕೊಂಬೆಗಳನ್ನು ಸಮರ್ಪಕವಾಗಿ ಟ್ರಿಮ್ ಮಾಡಲು ಕೋರಿದರು.

ಉತ್ತರ:– ಈ ವಿಷಯವಾಗಿ ಬೀದಿದೀಪಗಳನ್ನು ಅಳವಡಿಸುವವರನ್ನು ಸ್ಥಳದಲ್ಲಿಯೇ ಕರೆಯಿಸಿಕೊಂಡು ಸರಿಪಡಿಸಲು ತಿಳಿಸಲಾಯಿತು ಮತ್ತು ಪೈಪ್‌ಲೈನ್ ಪಾರ್ಕ್‌ನಲ್ಲಿ ಮರದ ಕೊಂಬೆಗಳನ್ನು ಟ್ರಿಮ್ ಮಾಡಲು ತೋಟಗಾರಿಕಾ ಅಧಿಕಾರಿರವರಿಗೆ ತಿಳಿಸಲಾಯಿತು.

4. ಲಕ್ಷ್ಮೀಪತಿ ರವರು ಮಾತನಾಡಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮೀಟರ್ ಅಳವಡಿಸದೇ ನೀರಿನ ಬಿಲ್ಲು ನೀಡಲಾಗುತ್ತಿರುತ್ತದೆ ಈ ಕೂಡಲೇ ಸಭೆಯಲ್ಲಿ ಹಾಜರಿರುವ ಅಧಿಕಾರಿಗಳು ಸರಿಪಡಿಸುವಂತೆ ಕೋರಿದರು.

ಉತ್ತರ:- ಈ ವಿಷಯವಾಗಿ ಸ್ಥಳದಲ್ಲಿಯೇ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿರವರಿಗೆ ಮೇಲಿನ ಸಮಸ್ಯೆಯನ್ನು ನಿವಾರಿಸಲು ತಿಳಿಸಲಾಯಿತು.

ಈ ಮೇಲಿನ ಎಲ್ಲಾ ಅಂಶಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಲು ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ ವಿಶ್ವನಾಥ್ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿಭಾಗದ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದರು ಮತ್ತು ಮುಂದಿನ ಸಭೆಯಲ್ಲಿ ಈ ಬಗ್ಗೆ ಅನುಸರಣಾ ವರದಿಯನ್ನು ಸಲ್ಲಿಸುವಂತೆ ತಿಳಿಸಿದರು ಮತ್ತು ಸಭೆಯಲ್ಲಿ ಹಾಜರಿದ್ದ ಆರೋಗ್ಯಾಧಿಕಾರಿಯೊಂದಿಗೆ ಚರ್ಚಿಸಿ ಕೋವಿಡ್ ವ್ಯಾಕ್ಸಿನೇಷನ್, ಬೂಸ್ಟರ್ ಡೋಸ್ ಮತ್ತು ಡೆಂಗ್ಯೂ ಪ್ರಕರಣಗಳ ಬಗ್ಗೆ ಮಾಹಿತಿ ಪಡೆದರು. ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸದಸ್ಯರಿಗೆ, ಅಧಿಕಾರಿಗಳಿಗೆ, ಸಾರ್ವಜನಿಕರಿಗೆ ಧನ್ಯವಾದಗಳನ್ನು ತಿಳಿಸುತ್ತಾ ವಾರ್ಡ್ ಸಭೆಯನ್ನು ಮುಕ್ತಾಯಗೊಳಿಸಿದರು.

Sd/-

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ನಂ. 13, ಮಲ್ಲಸಂದ್ರ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

Sd/-

**ನೋಡಲ್ ಅಧಿಕಾರಿ ಹಾಗೂ**
**ವಾರ್ಡ್ ಸಮಿತಿ ಅಧ್ಯಕ್ಷರು, ವಾ.ನಂ.13, ಮಲ್ಲಸಂದ್ರ**
**ಮತ್ತು ತಹಶೀಲ್ದಾರ್, ಉಪ ಆಯುಕ್ತರು(ಭೂಸ್ವಾಧೀನ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಧಿಕಾರಿಗಳ ಮಾಹಿತಿಗಾಗಿ:-**

1) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
4) ಆರೋಗ್ಯ ವೈಧ್ಯಾಧಿಕಾರಿಗಳು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ವಲಯ ಅರಣ್ಯಾಧಿಕಾರಿಗಳು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ಶೆ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ.
8) ಸಹಾಯಕ ಕಂದಾಯ ಅಧಿಕಾರಿ (ಶೆ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಕಳುಹಿಸಿದೆ.
11) ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 13 ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12) ಕಛೇರಿ ಪ್ರತಿ.